ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಇವತ್ತು ಕೂಡ ಮಂತ್ರಿಗಳು ಇಲ್ಲ. ಇದು ಪ್ರತಿನಿತ್ಯದ ಸಮಸ್ಯೆಯಾಗಿದೆ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಹಾದೇವಪ್ಪನವರೆ ನೀವು ಇಲ್ಲಿ ಕೂತಿದ್ದಾಗ ಏನು ಮಾತನಾಡುತ್ತಿದ್ದಿರಿ?

ಒಬ್ಬ ಮಾನ್ಯ ಸದಸ್ಯರು : ಆರು ಜನ ಮಂತ್ರಿಗಳಿದ್ದಾರೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಈ ಭಾಗದಲ್ಲಿದ್ದಾಗ ಒಂದು ರೀತಿ ನಡೆದುಕೊಳ್ಳುವುದು ಆ ಭಾಗದಲ್ಲಿದ್ದಾಗ ಮತ್ತೊಂದು ರೀತಿ ನಡೆದುಕೊಳ್ಳುವುದೇ

ಡಾ : ಹೆಚ್.ಸಿ. ಮಹದೇವಪ್ಪ : ಮಂತ್ರಿಗಳು ಇಲ್ಲದಿದ್ದರೆ ನೀವು ಹೇಳಿದ್ದು ಸರಿಯಾಗಿದೆ. ಆದರೆ ನಾವು ಮಂತ್ರಿಗಳು ಇಲ್ಲಿ ಇದ್ದೇವಲ್ಲಾ?

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವು KPSC ಬಗ್ಗೆ ಒಂದು ಪ್ರಸ್ತಾಪ ಮಾಡಿದ್ದೀರಿ. ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತೇವೆಂದು ಹೇಳಿದ್ದಾರೆ. ಅವರು ಬಂದ ಮೇಲೆ ಉತ್ತರ ಕೊಡುತ್ತಾರೆ.

1. **ಕೆ.ಪಿ.ಎಸ್.ಸಿ. ಬಗ್ಗೆ.**

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ವಿರೋಧ ಪಕ್ಷದ ನಾಯಕರು): ಮಾನ್ಯ ಮುಖ್ಯಮಂತ್ರಗಳು ಬಂದರು, ನಾನು ಅದಕ್ಕೆ ಸ್ವಲ್ಪ ಅಡಿಷನ್ ಆಗಿ ಹೇಳಬೇಕಾಗಿದೆ. KPSC ಬಗ್ಗೆ ಪ್ರತಿ ನಿತ್ಯ series ಆಗಿ ಪತ್ರಿಕೆಗಳಲ್ಲಿ newsitem ಬರುತ್ತಿದೆ. ಅದರ ಬಗ್ಗೆ ಒಂದು ನಿಲುವಳಿ ಸೂಚನೆ ಕಳುಹಿಸಿದ್ದೇನೆ. ಅದರ ಬಗ್ಗೆ ಉತ್ತರ ಕೊಡುತ್ತೇವೆಂದು ಹೇಳಿದ್ದರು. ಆ ಸಂಸ್ಥೆ ಬಗ್ಗೆ ಇರತಕ್ಕಂತಹ ಹಲವಾರು ರೀತಿಯ ಅಭಿಪ್ರಾಯಗಳು ಆ ಸಂಸ್ಥೆ ಬಗ್ಗೆ ಮಾಧ್ಯಮಗಳಲ್ಲಿ ಪ್ರತಿನಿತ್ಯ ಬರತಕ್ಕಂತಹ ಹೇಳಿಕೆಗಳೇನಿವೆ ಅದು, ಇಂದೂ ಹಿಂದೂ ಪತ್ರಿಕೆಯಲ್ಲಿ ಬಂದಿದೆ. ಇದರ ಬಗ್ಗೆ ನಾನು ಏಕೆ ನಿಲುವಳಿ ಸೂಚನೆ ತಂದಿದ್ದೇನೆಂದರೆ, ಈ ಸಂಸ್ಥೆಯನ್ನು ಬೀದಿಯಲ್ಲಿ ಹರಾಜು ಹಾಕತಕ್ಕಥದ್ದು, ಮಾಧ್ಯಮಗಳಲ್ಲಿ ಈ ಸಂಸ್ಥೆಯಲ್ಲಿ ಹಾಗೆ ನಡೆಯುತ್ತಿದೆ, ಹೀಗೆ ನಡೆಯುತ್ತಿದೆ ಎಂದು ಯಾರೋ ಒಂದು ಹೇಳಿಕೆಗಳನ್ನು ಕೊಡುವುದು ಅದರಲ್ಲಿ ಏನೋ

ನಡೆಯಬಾರದ್ದು ನಡೆಯುತ್ತಿದೆ ಎನ್ನತಕ್ಕಂತಹ ಮಾಹಿತಿಗಳು ಇವತ್ತು ಏನು ಚರ್ಚೆ ನಡೆಯುತ್ತಿದೆ, ಅದಕ್ಕೋಸ್ಕರ ಕೆಲವು ವಿಷಯ ಚರ್ಚೆ

ಮಾಡಬೇಕು, ಇದು ಬಹಳ ಗಹನವಾದ ವಿಷಯ. ಪ್ರತಿಭಾವಂತರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಮಾಧ್ಯಮಗಳಲ್ಲಿ ಏನು ಬರುತ್ತಿದೆ, ಸರ್ಕಾರಕ್ಕೆ ಯಾರಾದರೂದೂರ ಕೊಟ್ಟಿದ್ದಾರೋ ಇಲ್ಲವೋ ಗೊತ್ತಿಲ್ಲ ನನಗೆ. ಮಾಧ್ಯಮಗಳಲ್ಲಿ ಬರತಕ್ಕಂತಹ ವರದಿ ಮೇಲೆ ತನಿಖೆ ನಡೆಸುತ್ತೀರೋ, ಇಲ್ಲಾ ಸರ್ಕಾರಕ್ಕೆ ಯಾರಾದರೂ ಪ್ರತಿಭಾನ್ವಿತ ವಿದ್ಯಾರ್ಥಿಗಳು ತೊಂದರೆಯಾಗಿರುವ ಬಗ್ಗೆ ಏನಾದರೂ ಅರ್ಜಿ ಕೊಟ್ಟಿದ್ದಾರೋ ಇದರ ಬಗ್ಗೆ ಚರ್ಚೆಯಾಗಬೇಕು ಅಧ್ಯಕ್ಷರೆ, ಅದಕ್ಕೋಸ್ಕರ ಒಂದು ಅವಕಾಶ ಕೊಡುಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಯು..ಬಿ. ಬಣಕಾರ್ : ಮಾನ್ಯ ಯಡಿಯೂರಪ್ಪನವರ ಮೊನ್ನೆ ಈ ವಿಷಯನ್ನು ಪ್ರಸ್ತಾಪ ಮಾಡಿದ್ದರು. ಆಗ ಮುಖ್ಯಮಂತ್ರಿಯವರು ಉತ್ತರ ಕೊಡುವುದಾಗಿ ಹೇಳಿದ್ದರು.

ಅಧ್ಯಕ್ಷರು : ನಾನು ಅದನ್ನೇ ಹೇಳಿದ್ದು.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ನಿಲುವಳಿ ಸೂಚನೆ ಮೂಲಕ ತಂದು ಪ್ರಸ್ತಾಪ ಮಾಡುತ್ತಿದ್ದಾರೆ. ನಾವು ಉತ್ತರ ಕೊಡುವುದಕ್ಕೆ ತಯಾರಾಗಿದ್ದೇವೆ. ಆದರೆ ನಿಲುವಳಿ ಸೂಚನೆ ಪ್ರಕಾರ ಬೇಡ, ನಿಯಮ 69ಕ್ಕೆ convert ಮಾಡಿ. ನಾನು ಉತ್ತರ ಕೊಡುತ್ತೇನೆ. ಮಾನ್ಯ ಯಡಿಯೂರಪ್ಪನವರು ಇದೇ ವಿಚಾರವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದರು. ನಿಲುವಳಿ ಸೂಚನೆ ಅಲ್ಲ ಅದು. ಶೂನ್ಯ ವೇಳೆಯಲ್ಲಿ ತಂದಿರುವುದು ಇದೂ ಎರಡೂ ಒಟ್ಟಿಗೆ ಉತ್ತರ ಕೊಡುತ್ತೇನೆ.

ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ನನಗೆ ನಿಯಮ 69ರ ಕೆಳಗೆ ಚರ್ಚೆ ಮಾಡುವುದಕ್ಕೆ ಇವತ್ತೇ ಅವಕಾಶಮಾಡಿಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು : ಶೂನ್ಯ ವೇಳೆ, ಮಾನ್ಯ ಬೋಪಯ್ಯನವರು.

ಶ್ರೀ ಕೆ.ಜಿ. ಬೋಪಯ್ಯ : ಮಾನ್ಯ ಅಧ್ಯಕ್ಷರೆ, . . .

ಅಧ್ಯಕ್ಷರು : ಮಾನ್ಯ ಬೋಪಯ್ಯನವರೇ ನಿಮ್ಮಲ್ಲಿ ನನ್ನ ವಿನಂತಿ ಶೂನ್ಯ ವೇಳೆಯಲ್ಲಿ ಚರ್ಚೆ ಮಾಡುವುದಕ್ಕಾಗಿ ಬಹಳಷ್ಟು ವಿಷಯಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ಸ್ವಲ್ಪ ಸಂಕ್ಷಿಪ್ತವಾಗಿ ಹೇಳಿ.